ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ರಾಜರಾಜೇಶ್ವರಿ ನಗರ ವಲಯ.

ಸಂ:ಕಾ.ಪಾ.ಅ(ವಿ)/ರಾರಾನವ/ಆ.ಮ/ 04 /2020–21

ಕಾರ್ಯಪಾಲಕ ಅಭಿಯಂತರರು (ವಿದ್ಯುತ್)ರವರ ಕಛೇರಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ರಾಜರಾಜೇಶ್ವರಿ ನಗರ ವಲಯ.
ದಿನಾಂಕ: 24/12/2020.

ಆಡಳಿತಾತ್ಮಕ ಮಂಜೂರಾತಿ ಜ್ಞಾಪನ ಪತ್ರ

ಕಾಮಗಾರಿಯ ಹೆಸರು: **Providing Electrical Maintenance and repairs to Park lightings and other installation at Jp Park ward No 17 of RR Nagar zone**

ಅಂದಾಜು ಮೊತ್ತ: ರೂ 6.00 **ಲಕ್ಷಗಳು**

ಉಲ್ಲೇಖ: ಮುಖ್ಯ ಅಭಿಯಂತರರು (ರಾ.ರಾ ನಗರ) ರವರ ಆದೇಶ ಸಂಖ್ಯೆ:-2886/20-21 ದಿ:18/12/2020.

***

ಈ ಮೇಲೆ ವಿವರಿಸಿರುವ ಕಾಮಗಾರಿಯ ಅಂದಾಜು ಮೊತ್ತ **ರೂ.6.00 ಲಕ್ಷಗಳ** ಅಂದಾಜು ಪಟ್ಟಿಗೆ 2019–20 ನೇ ಸಾಲಿನ ಪಾಲಿಕೆ ಅನುಮೋದಿತ ಆಯವ್ಯಯದ ಲೆಕ್ಕಶೀರ್ಷಿಕೆ **P0298** ರಡಿಯಲ್ಲಿ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿಗಳ ಸ್ಥಾಯಿ ಸಮಿತಿಯ ನಡವಳಿಗಳನ್ವಯ **ಜಾಬ್ ಸಂಖ್ಯೆ:017–20–000015** ದೊರಕಿರುತ್ತದೆ. ಉಲ್ಲೇಖಿತ ಆದೇಶದಲ್ಲಿ ಮುಖ್ಯ ಅಭಿಯಂತರರು (ರಾ.ರಾ ನಗರ) ರವರಿಂದ ಈ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ದೊರಕಿರುತ್ತದೆ.

ಮಾನ್ಯ ಆಯುಕ್ತರು ರವರ ಅಧಿಕಾರ ಪ್ರತ್ಯಾಯೋಜನಾ ಕಛೇರಿ ಆದೇಶ ಸಂಖ್ಯೆ: ಬಿ12(1)ಪಿ.ಆರ್/394/2019–20, ದಿನಾಂಕ: 25/09/2019 ರಲ್ಲಿ ಕಾರ್ಯಪಾಲಕ ಅಭಿಯಂತರರಿಗೆ ಸ್ವಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆಯಾಗಿರುವ ಎಲ್ಲಾ ಮೊತ್ತದ ಅಂದಾಜು ಪಟ್ಟಿಗಳ ಆಡಳಿತಾತ್ಮಕ ಮಂಜೂರಾತಿ ಆದೇಶ ಹೊರಡಿಸಲು ನೀಡಿರುವ ಅಧಿಕಾರ ಪ್ರತ್ಯಾಯೋಜನೆಯ ಅನ್ವಯ ಸದರಿ ಆಡಳಿತಾತ್ಮಕ ಮಂಜೂರಾತಿ ಆದೇಶ ಪ್ರತಿಗೆ ಸಹಿ ಮಾಡಲಾಗಿದೆ. ಆಡಳಿತಾತ್ಮಕ ಮಂಜೂರಾತಿ ಪುಸ್ತಕದ ಪುಟ ಸಂಖ್ಯೆ 40/44 ರ ಕ್ರಮ ಸಂಖ್ಯೆ 04 ರಲ್ಲಿ ಈ ಕೆಳಗಿನ ಷರತ್ತುಗಳಿಗೊಳಪಟ್ಟು ದಾಖಲಿಸಲಾಗಿದೆ.

ಷರತ್ತುಗಳು:

1) ದರಪಟ್ಟಿ ಆಧಾರಿತವಲ್ಲದ ಅಂಶಗಳಿಗೆ ಡೆಟಾ ದರವನ್ನು ತಯಾರಿಸಿ ಅನುಮೋದನೆ ಪಡೆಯುವುದು.
2) ಅಂದಾಜು ಪಟ್ಟಿಯಲ್ಲಿ ಮಾರುಕಟ್ಟೆ ದರ ಅಳವಡಿಸಿಕೊಂಡಿರುವ ಅಂಶಗಳಿಗೆ ಕೊಟೇಶನ್ ಕರೆದು ಅನುಮೋದನೆ ಪಡೆಯುವುದು.
3) ಕೆಲಸದ ಸ್ಥಳದಿಂದ ಸಾಗಣೆ ದೂರಕ್ಕೆ ಅನುಮೋದನೆ ಪಡೆಯುವುದು.
4) ವಿನ್ಯಾಸಗಳನ್ನು ಸಂಬಂಧಪಟ್ಟ ಮೇಲಾಧಿಕಾರಿಗಳಿಂದ ಅನುಮೋದಿಸಿಕೊಂಡು ಕಾರ್ಯಗತಗೊಳಿಸುವುದು.

ಕಾರ್ಯಪಾಲಕ ಅಭಿಯಂತರರು (ವಿದ್ಯುತ್)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ರಾಜರಾಜೇಶ್ವರಿ ನಗರ ವಲಯ.

ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಿದೆ.

1) ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು. ರವರ ಮಾಹಿತಿಗಾಗಿ,
2) ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು. ರವರ ಮಾಹಿತಿಗಾಗಿ,
3) ಮುಖ್ಯ ಅಭಿಯಂತರರು, ರಾಜರಾಜೇಶ್ವರಿ ನಗರ ವಲಯ, ಬೃಬೆಂ.ಮ.ಪಾ, ರವರ ಮಾಹಿತಿಗಾಗಿ,
4) ಕಛೇರಿ ಪ್ರತಿ